**1 ನೇ ಹೆಚ್ಚುವರಿ  ಹಿರಿಯ ದಿವಾಣಿ  ನ್ಯಾಯಾಧೀಶರು ಮತ್ತು ಸಿಜೆಎಂ ನ್ಯಾಯಾಲಯ
ಧಾರವಾಡ.**

**ಸಿ.ಸಿ.ನಂ.1266/2025**

**ಡಿ.ಡಬ್ಲೂ. 01**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಪ್ಪ ಇದಿಯಮ್ಮನವರ |
| ತಂದೆಯ ಹೆಸರು | : | ನಿಂಗಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಸರಕಾರಿ ಪ್ರಾಥಮಿಕ ಶಾಲೆ ಶಿಕ್ಷಕ |
| ವಾಸಸ್ಥಳ | : | ಧಾರವಾಡ. |

**ಸಾಕ್ಷಿಯನ್ನು ದಿಃ *22/12/2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಶ್ರೀ ಎಸಎಸಪಿ ವಕೀಲರಿಂದ.**

ನನಗೂ ಫಿರ್ಯಾದಿದಾರರಿಗೆ ಪರಿಚಯವಿರುವುದಿಲ್ಲ. ನಾನು ಅವರ ಜೊತೆಗೆ ಯಾವುದೇ ವ್ಯವಹಾರ ಮಾಡಿಲ್ಲ. ಅದರಂತೆ ಸದರಿಯವರಿಗೆ ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ. ನಾನು ಉಪ್ಪಿನಬೇಟಗೇರಿಯಲ್ಲಿ 2013 ರಿಂದ 2016 ವರೆಗೆ ಕೆಲಸ ಮಾಡುತ್ತಿದ್ದೆ. ಆ ಸಮಯದಲ್ಲಿ ನಾನು ಧಾರವಾಡದಿಂದ ನಾನು ಹೋಗಿ ಬಂದು ಮಾಡುತ್ತಿದ್ದೆ. ನನಗೆ ಶಿವಾನಂದ ಬೇಟಗೇರಿ ಎನ್ನುವವರ ಜೊತೆಗೆ ಸ್ನೇಹವಿತ್ತು, ಸದರಿ ಸ್ನೇಹದಿಂದ ನಾನು ಅವರಿಂದ 2 ಲಕ್ಷ ರೂಪಾಯಿಗಳ ಕೈಗಡ ಸಾಲ ಪಡೆದಿದ್ದೆ. ಆ ಸಮಯದಲ್ಲಿ ನಾನು ಸದರಿ ಶಿವಾನಂದ ಬೇಟಗೇರಿ ಇವರಿಗೆ ಎರಡು ಚೆಕ್ಕಗಳನ್ನು ಸಾಲದ ಭದ್ರತೆಗಾಗಿ ನೀಡಿದ್ದು ಇರುತ್ತದೆ. ಸದರಿ ಭದ್ರತಾ ಚೆಕ್ಕುಗಳಲ್ಲಿ ಒಂದು ಚೆಕ್ಕನ್ನು ಫಿರ್ಯಾದಿದಾರರಾದ ಇಕ್ಬಾಲ ಮುಖಾಂತರ ಅವರು ದುರುಪಯೋಗ ಮಾಡಿಕೊಂಡಿರುತ್ತಾರೆ. ನಾನು ಪಡೆದುಕೊಂಡ 2 ಲಕ್ಷ ರೂಪಾಯಿಗಳ ಸಾಲದ ಮೊತ್ತವನ್ನು ಸದರಿ ಶಿವಾನಂದ ಬೇಟಗೇರಿ ಇವರಿಗೆ ಬ್ಯಾಂಕ ಖಾತೆ ಮುಖಾಂತರ ಮತ್ತು ಅವರು ತಿಳಿಸಿದ ಮತ್ತು ನೀಡಿದ ಖಾತೆಗೆ ಮರುಪಾವತಿ ಮಾಡಿದ್ದರು ಸಹ ಸದರಿ ಚೆಕ್ಕನ್ನು ಫಿರ್ಯಾದಿದಾರರ ಮುಖಾಂತರ ದುರುಪಯೋಗ ಮಾಡಿಕೊಂಡಿರುತ್ತಾರೆ. ದಿಃ20-02-2023 ರಂದು ಶಿವಾನಂದ ಬೇಟಗೇರಿ ಇವರ ಖಾತೆಗೆ 24 ಸಾವಿರ ರೂಪಾಯಿಗಳನ್ನು, ದಿಃ17-07-2023 ರಂದು 27 ಸಾವಿರ ರೂಪಾಯಿಗಳನ್ನು, ದಿಃ03-09-2023 ರಂದು 27 ಸಾವಿರ ರೂಪಾಯಿಗಳನ್ನು, 03-10-2023 ರಂದು

27 ಸಾವಿರ ರೂಪಾಯಿಗಳನ್ನು, ದಿಃ26-11-2023 ರಂದು 27 ಸಾವಿರ ರೂಪಾಯಿಗಳನ್ನು ಮತ್ತು ದಿಃ23-12-2023 ರಂದು ಅವರು ಹೇಳಿದ ಮೇರೆಗೆ ಸೌಮ್ಯ ಎನ್ನುವವರ ಖಾತೆಗೆ 27 ಸಾವಿರ ರೂಪಾಯಿಗಳನ್ನು ಮತ್ತು 01-02-2024 ರಂದು ಶಿವಾನಂದ ಇವರ ಹೇಳಿಕೆ ಮೇರೆಗೆ ಅಬ್ದುಲ ಇವರ ಖಾತೆಗೆ 27 ಸಾವಿರ ರೂಪಾಯಿಗಳನ್ನು ಮತ್ತು 02-03-2024 ರಂದು ಶಿವಾನಂದ ಬೇಟಗೇರಿ ಇವರ ಖಾತೆಗೆ 10 ಸಾವಿರ ರೂಪಾಯಿಗಳನ್ನು ಮತ್ತು 4 ಸಾವಿರ ರೂಪಾಯಿಗಳನ್ನು ನಗದು ರೂಪದಲ್ಲಿ ಕೊಟ್ಟಿದ್ದು ಇರುತ್ತದೆ. ಈ ರೀತಿ 2 ಲಕ್ಷ ರೂಪಾಯಿಗಳನ್ನು ಮುಟ್ಟಿಸಿದ್ದು ಇರುತ್ತದೆ. ಈ ರೀತಿ 4 ಸಾವಿರ ರೂಪಾಯಿಗಳನ್ನು ನಗದನ್ನು ಕೊಟ್ಟಾಗ ಭದ್ರತಾ ಚೆಕ್ಕಗಳನ್ನು ಮರಳಿ ಕೊಡಬೇಕೆಂದು ಕೇಳಿದಾಗ, ನಾನು ಈಗ ತಂದಿರುವುದಿಲ್ಲ, ನಂತರ ಕೊಡುತ್ತೇನೆ ಎಂದು ಸದರಿ ಶಿವಾನಂದ ಬೇಟಗೇರಿ ಹೇಳಿದ್ದು ಇರುತ್ತದೆ. ಸದರಿಯವರಿಗೆ ಸತತವಾಗಿ ಬೇಡಿಕೆ ಇಟ್ಟರೂ ಸಹ ಒಂದಲ್ಲದೆ ಇನ್ನೊಂದು ಕಾರಣಕ್ಕೆ ದಿನಮೇಕ ಮಾಡುತ್ತಾ ಬಂದಿರುತ್ತಾರೆ, ಕೊನೆಗೆ ನೀವು ಬಡ್ಡಿಯನ್ನು ಕೊಡಬೇಕು, ಅದನ್ನು ಕೊಟ್ಟಾಗ ಮಾತ್ರ ಮರಳಿ ಚೆಕ್ಕನ್ನು ಕೊಡುತ್ತೇನೆ ಎಂದು ಹೇಳಿದ್ದು ಇರುತ್ತದೆ. ಆ ಸಮಯದಲ್ಲಿ ಬಡ್ಡಿಯ ಮಾತುಕತೆ ನಮ್ಮ ಮಧ್ಯಯಾಗಿರುವುದಿಲ್ಲ, ಆದ್ದರಿಂದ ದಯಮಾಡಿ ನನ್ನ ಚೆಕ್ಕುಗಳನ್ನು ವಾಪಸ್ಸ ಕೊಡಬೇಕೆಂದು ವಿನಂತಿಸಿಕೊಂಡಿದ್ದು ಇರುತ್ತದೆ. ಈ ರೀತಿ ಬಡ್ಡಿ ನಿರಾಕರಿಸಿದ ಕಾರಣವೇ ಸದರಿ ಶಿವಾನಂದ ಇವರು ಫಿರ್ಯಾದಿದಾರರ ಮುಖಾಂತರ ಸದರಿ ಭದ್ರತಾ ಚೆಕ್ಕನ್ನು ಅವರೇ ಬರೆದುಕೊಂಡು ದುರುಪಯೋಗ ಮಾಡಿಕೊಂಡು, ಈ ರೀತಿ ಸುಳ್ಳು ಪ್ರಕರಣ ಹೂಡಿದ್ದು ಇರುತ್ತದೆ.

2023 ರಂದು ನನ್ನ ವೇತನ 80 ಸಾವಿರ ರೂಪಾಯಿ ಮೇಲ್ಪಟ್ಟು ಇರುತ್ತದೆ, ಆದ್ದರಿಂದ ಪ್ರಸ್ತುತ ಫಿರ್ಯಾದಿದಾರರ ಹತ್ತಿರ ನನಗೆ ಸಾಲವನ್ನು ಪಡೆಯುವ ಅವಶ್ಯಕತೆ ಇರಲಿಲ್ಲ. ಅದರಂತೆ ನಾನು ಮೇ 2024 ಮತ್ತು ನವೆಂಬರ 2025 ರ ವೇತನ ಪ್ರಮಾಣಪತ್ರದ ದೃಢಿಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ***ನಿ.ಡಿ.1 ಮತ್ತು 2*** ಎಂದು ಗುರುತಿಸಲಾಯಿತು.

ಶಿವಾನಂದ ಬೇಟಗೇರಿ ಇವರಿಗೆ ಮತ್ತು ಅವರು ಹೇಳಿದ ವ್ಯಕ್ತಿಗಳಿಗೆ ಹಣವನ್ನು ಬ್ಯಾಂಕ ಖಾತೆ ಮುಖಾಂತರ ವರ್ಗಾಯಿಸಿದ ಬಗ್ಗೆ ನನ್ನ ಬ್ಯಾಂಕ ಖಾತೆಯ 125 ಪುಟಗಳ ವಿವರಗಳ ದೃಢಿಕೃತ ನಕಲನ್ನು

ಹಾಜರುಪಡಿಸಿದ್ದು, ಅದನ್ನು ***<u>ನಿ.ಡಿ.3</u>*** ಎಂದು ಗುರುತಿಸಲಾಯಿತು. ಆದುದರಿಂದ ದಾಖಲೆಗಳನ್ನು ಮತ್ತು ತಕರಾರು ಪರಿಶೀಲಿಸಿ ಶಿವಾನದ ಬೇಟಗೇರಿ ಇವರು ಪ್ರಸ್ತುತ ಫಿರ್ಯಾದಿದಾರೊಂದಿಗೆ ಮಿಲಾಪಿಯಾಗಿ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕಾಗಿ ವಿನಂತಿ.

***ಪಾಟೀ ಸವಾಲು : ಫಿರ್ಯಾದಿದಾರರ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.